**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು
**LAC.No. 18/2019**

ಪಿ**.**ಡಬ್ಲ್ಯೂ**. 1**

ದಿನಾಂಕಃ **12.07.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಪಿ**.**ಆರ್**.**ಜೆ**.** ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ**.** ನಾನೇ ಹೇಳಿ ಬರೆಸಿ ಸಹಿ ಮಾಡಿರುತ್ತೇನೆ**.**

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು ನಿಶಾನೆಗಳಾಗಿ ಗುರುತಿಸಲಾಯಿತು**.**

ನಿ.ಪಿ.1 ದಿ.14.11.2013 ರ 4(1) ನೋಟಿ ಫಿಕೇಷನ್

ನಿ.ಪಿ.2 ಅರ್ಜಿದಾರರಿಗೆ ನೀಡಿದ ನೋಟೀಸ್ ನ ದೃಡಿಕೃತ ನಕಲು

ನಿ.ಪಿ.3 ಜಂಟಿ ಅಳತೆ ತ ಖ್ತೆಃ

ನಿ.ಪಿ.4 ದಿ.17.03.2017 ರ 6(1) ನೋಟಿ ಫಿಕೇಷನ್

ನಿ.ಪಿ.5 ದಿ.08.07.2016 ರ ನೋಟೀಸ್

ನಿ.ಪಿ.6 ಅವಾರ್ಡ ತಖ್ತೆಃ

ನಿ.ಪಿ.7 ದಿ.22.08.2017 ರ ನಡವಳಿ

ನಿ.ಪಿ.8 ದಿ.27.11.2017 ರ ಅವಾರ್ಡ್ ನೋಟೀಸ್

ನಿ.ಪಿ.9 ಅರಣ್ಯ ಇಲಾಖೆರವರು ನೀಡಿದ ಮರಗಳ ಅಂದಾಜು ಫಸಲು ಮತ್ತು ಇಳುವರಿ ವಿವರ

ಪಾಟೀ ಸವಾಲುಃ **2** ನೇ ಎದುರುದಾರರ ಪರವಾಗಿಃ ಶ್ರೀಮತಿ**.**
ವಕೀಲರಿಂದಃ

1. ಸರ್ವೆ ನಂ.92/2 ರಲ್ಲಿ 4 1/2 ಗುಂಟೆ ಜಮೀನು ಇದೆ. ನಾನು ಎದುರುದಾರರು ನೀಡಿದ ಪರಿಹಾರದ ಹಣವನ್ನು ಸ್ವೀಕರಿಸಿರುತ್ತೇನೆ. ತೋಟಗಾರಿಕೆ ಇಲಾಖೆರವರ ಮೌಲ್ಯ ಮಾಪನದಂತೆ 18 ಜಾಲಿ ಮರಗಳಿಗೆ ಸೂಕ್ತ ಪರಿಹಾರ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರರು ಸೂಕ್ತ ಮತ್ತು ವೈಜ್ಞಾನಿಕ ಪರಿಹಾರವನ್ನು ಪಾವತಿಸಿದ್ದರೂ ನಾನು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ಗುಂಟೆ ಜಮೀನಿಗೆ 10 ಲಕ್ಷ ಬೆಲೆ ಬಾಳುವ ಬಗ್ಗೆ ನಾನು ದಾಖಲಾತಿಗಳನ್ನು ಹಾಜರುಪಡಿಸಿಲ್ಲ.

ಪಾಟೀ ಸವಾಲುಃ **1** ನೇ ಎದುರುದಾರರ ಪರವಾಗಿಃ ಶ್ರೀ ಡಿಜಿಪಿ
ವಕೀಲರಿಂದಃ

18 ಜಾಲಿ ಮರಗಳಿಂದ ಸುಮಾರು 20 ಸಲೆ ಮರದ ಸಾಮಾನುಗಳು ಬರುತ್ತಿತ್ತು ಎಂದು ಅರಣ್ಯ ಇಲಾಖೆಗಳಿಂದ ವರದಿ ಪಡೆದು ಹಾಜರುಪಡಿಸಿದ್ದೇನೆ. ನನ್ನ ಜಮೀನಿಗೆ ಹೊಂದಿಕೊಂಡಂತೆ ರಸ್ತೆ ಇರುತ್ತದೆ. ನನ್ನ ಜಮೀನಿಗೆ ರಾಷ್ಟ್ರೀಯ ಹದ್ದಾರಿ ಹತ್ತಿರದಲ್ಲಿ ಇದೆ. ತುಮಕೂರಿನಿಂದ ನಮ್ಮ ಜಮೀನು 13 ಕಿ.ಮೀ ದೂರದಲ್ಲಿ ಇದೆ. ನಮ್ಮ ಜಮೀನಿಗೆ ಹತ್ತಿರದಲ್ಲಿ ಲೇಔಟ್ ಇರುವ ಬಗ್ಗೆ ದಾಖಲಾತಿಗಳನ್ನು ನಾನು ನನ್ನ ವಕೀಲರ ಮೂಲಕ ಹಾಜರುಪಡಿಸಿದ್ದೇನೆ. ನನ್ನ ಜಮೀನಿನ

ಅಕ್ಕಪಕ್ಕದ ಜಮೀನಿನ ಆಸ್ತಿಗಳು ಲೇಔಟ್ ಅಗಿದೆ. ನನ್ನ ಜಮೀನಿನ ಹತ್ತಿರದ ಜಮೀನು ಹೆಚ್ಚಿನ ಕ್ರಯದ ಮೊಬಲಗಿಗೆ ಮಾರಾಟವಾಗಿರುವ ಬಗ್ಗೆ ನಾನು ದಾಖಲಾತಿಯನ್ನು ನನ್ನ ವಕೀಲರ ಮೂಲಕ ಹಾಜರುಪಡಿಸಿದ್ದೇನೆ.

2 ನೇ ಎದುರುದಾರರ ಪಾಟೀ ಸವಾಲನ್ನು ತನ್ನ ಪಾಟೀ ಸವಾಲು ಎಂದು ಪರಿಗಣಿಸಲು ಅನುಮತಿ ಕೋರಿರುತ್ತಾರೆ, ಅನುಮತಿಸಲಾಯಿತು.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು
**C.Mis. /2019**

ಪಿ**.**ಡಬ್ಲ್ಯೂ**. 1**

ದಿನಾಂಕಃ**03.10.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲು ಎದುರುದಾರರ ಪರ ವಕೀಲರಿಂದಃ

ಮರುವಿಚಾರಣೆಃ ಇಲ್ಲ

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು